Rotary ರೋಟರಿ ಐಸಿರಿ ಪರ್ಕಳ
ವಲಯ-4, ರೋ. ಜಿಲ್ಲೆ-3182
ನಮ್ಮ ನಡೆ... ಕೃಷಿಯ ಕಡೆ...
UNITE FOR GOOD

ರೊ. ರಾಜೇಶ್ ಡಿ. ಶೆಣೈ ಸಂಪಾದಕತ್ವದ
# ಐಶ್ವರ್ಯ
ಸಂಪುಟ: 4 ಸಾಪ್ತಾಹಿಕ ಸಂಚಿಕೆ : 39
ದಿನಾಂಕ: 31.03.2026


Rtn. Francesco Arezzo
R.I. President


Rtn. K. Palaksha
District Governor


Rtn. Anil Kumar
President


Rtn. Krishnappa
Secretary

ಏಪ್ರಿಲ್ 4 ಮತ್ತು 5: ಮೈಸೂರಿನಲ್ಲಿ

## ಸಶಕ್ತ 2026

### President and Secretary Elect Learning Seminar

ಅಂತಾರಾಷ್ಟ್ರೀಯ ರೋಟರಿ ಜಿಲ್ಲೆ 3182ರ ಎಲ್ಲಾ ನಿಯೋಜಿತ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರಿಗೆ ಏಪ್ರಿಲ್ 4 ಮತ್ತು 5ನೇ ತಾರೀಕಿನಂದು ಕಲಿಕಾ ಶಿಬಿರ ನಡೆಯಲಿದೆ. ಸಶಕ್ತ –2026 ಹೆಸರಿನಲ್ಲಿ, ಸಬಲ ನಾಯಕತ್ವ – ಸುಭದ್ರ ಸಂಘಟನೆ ಧ್ಯೇಯದಡಿ ಮೈಸೂರಿನ 'ಲೆ ರುಚಿ ದ ಪ್ರಿನ್ಸ್' ನಲ್ಲಿ ನಡೆಯಲಿರುವ ರೋಟರಿ ಐಸಿರಿಯ ನಿಯೋಜಿತ ಅಧ್ಯಕ್ಷ ರೊ. ಸಂದೀಪ್ ಕುಮಾರ್ ಮತ್ತು ನಿಯೋಜಿತ ಕಾರ್ಯದರ್ಶಿ ರೊ. ರಾಜೇಶ್ ಡಿ. ಶೆಣೈಯವರು ಭಾಗವಹಿಸಲಿದ್ದಾರೆ.



"Enjoy the Rotary"

- PDG Rajaram Bhat

> "ಕಾರ್ಯಸೂಚಿಯೊಂದಿಗೆ ಪರಿಣಾಮಕಾರಿಯಾಗಿ ನಡೆಸುವ ವಾರದ ಸಭೆಗಳೇ ಯಶಸ್ಸನ್ನು ನೀಡುತ್ತವೆ. ರೋಟರಿಯಲ್ಲಿ ಸಂತೋಷದಿಂದ ಭಾಗವಹಿಸಿ"

ಏಪ್ರಿಲ್ 11 ಮತ್ತು 12: ಸಕಲೇಶಪುರದಲ್ಲಿ

## ಸೇವಾ ಮಿಲನ

### Preserve Planet Earth, RAHALA, PP Institute

2016ರ ಏಪ್ರಿಲ್ 11 ಮತ್ತು 12ರಂದು, ಸಕಲೇಶಪುರ ತಾಲೂಕಿನ ಹಾನುಬಾಳು ಹತ್ತಿರವಿರುವ 'ವೈಟ್ ರಿವರ್ ರೆಸಾರ್ಟ್'ನಲ್ಲಿ 'ಸೇವಾ ಮಿಲನ' Preserve Planet Earth, RAHALA do Past Presidents Institute ಈ ಮೂರು ವಿಚಾರಧಾರೆಗಳ ಗೋಷ್ಠಿಯನ್ನೊಳಗೊಂಡ ಕಾರ್ಯಕ್ರಮ ನಡೆಯಲಿದೆ.

ಉತ್ತಮ ವಾಗ್ಮಿಗಳ ಜ್ಞಾನಧಾರೆ ಹಾಗೂ ಮಲೆನಾಡಿನ ಖಾದ್ಯಗಳೊಂದಿಗೆ, ಸುಂದರ ಕಾಫಿ ತೋಟಗಳ ಪರಿಸರದಲ್ಲಿ ನಡೆಯುವ ಈ ಕಾರ್ಯಕ್ರಮಕ್ಕೆ ನೊಂದಾವಣೆ ಆರಂಭವಾಗಿದೆ.



"Plan Your Work
and
Work Your Plan"

- PDG CA Dev Anand

> "Team Management
> Time Management
> Trust Management
> plays key role in the club management"

"ಇದು ಭಾಗ್ಯ.... ಇದು ಭಾಗ್ಯ..... ಇದು ಭಾಗ್ಯವಯ್ಯ...." ಮಾತಿನಂತೆ ನಾನು ರೋಟರಿ ಐಸಿರಿಯ ಸದಸ್ಯನಾಗಿರು ವುದು ನನ್ನ ಭಾಗ್ಯ. ನನಗೆ ರಾಜೇಶ್ ಡಿ. ಶೆಣೈ ಅವರ ಜೊತೆ ಕೆಲಸ ಮಾಡಲು ಅವಕಾಶ ಸಿಕ್ಕಿರುವುದು ನನ್ನ ಭಾಗ್ಯ. 2026–27ಕ್ಕೆ ಅಸಿಸ್ಟೆಂಟ್ ಗವರ್ನರ್ ಆಗಿ ರೊ. ಹೇಮಂತ್ ಯು. ಕಾಂತ್ ಆಯ್ಕೆ ಆಗಿರುವುದು ನಮ್ಮ ಭಾಗ್ಯ....

ಆತ್ಮೀಯರೇ, ಜೀವನದಲ್ಲಿ ಯೋಗ ಮತ್ತು ಯೋಗ್ಯತೆ ಪಡೆಯಲು ಮೊತ್ತ ಮೊದಲ ಹೆಜ್ಜೆ ಜ್ಞಾನ ಸಂಪಾದನೆ. ಈ ದೃಷ್ಟಿಯಿಂದ, ರೋಟರಿಯಲ್ಲಿ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರಿಗೆ ಇಡೀ ವರ್ಷವನ್ನು ನಿಭಾಯಿಸಲು ಬೇಕಾದ ಚಾಕಚಕ್ಯತೆಯನ್ನು ಕಲಿಸಿ ಕೊಡುವ ಕಾರ್ಯಾಗಾರಕ್ಕೆ ಮೈಸೂರಿಗೆ ಹೋಗಲು ನಾವು ಅಣಿಯಾಗಿದ್ದೇವೆ.

ಇದರಿಂದ, ರೋಟರಿ ಸಂಸ್ಥೆಯ ನಾಲ್ಕೂ ಕಂದಾಯ ಜಿಲ್ಲೆಗಳ ಮುಂದಾಳುಗಳ ಪರಿಚಯ, ವಲಯ ನಾಲ್ಕರ ತಂಡದ ಜೊತೆ ಪ್ರಯಾಣ ಮಾಡುವ ಖುಷಿಯನ್ನು ಆಸ್ವಾದಿಸಲು ಕಾತುರದಿಂದಿದ್ದೇವೆ. ಇದಕ್ಕೆ ರೋಟರಿ ಐಸಿರಿಯ ಸದಸ್ಯರ ಶುಭ ಹಾರೈಕೆ ಇರಲಿ.

ಇಂತಿ ನಿಮ್ಮವ,

**ಸಂದೀಪ್ ಕುಮಾರ್**
ನಿಯೋಜಿತ ಅಧ್ಯಕ್ಷರು
ರೋಟರಿ ಐಸಿರಿ



# ಕ್ಲೀಷೆ

## ಅರ್ಥ, ಪರಿಣಾಮ ಮತ್ತು ಹೊರಬರುವ ಮಾರ್ಗಗಳು...

ಈ ಬಗ್ಗೆ ನಾನು ವಾಟ್ಸಾಪ್ ನಲ್ಲಿ ಕೇಳಿದ್ದೆ. ಸುಮಾರು 43 ಉತ್ತರಗಳು ಬಂದಿದ್ದವು. ಬೇರೆ ಬೇರೆ ವರ್ಗದ ಓದುಗರ ಕೆಲವೊಂದು ಅಭಿಪ್ರಾಯಗಳನ್ನು / ಸಾರಾಂಶವನ್ನು ನಾನಿಲ್ಲಿ ಪ್ರಕಟಿಸುತ್ತಿದ್ದೇನೆ.

ಕೆಲವು ಜನರಿಗೆ ಒಮ್ಮೆ ಹೇಳಿದ್ದನ್ನೇ ಪದೇಪದೇ ವಾರಗಟ್ಟಲೇ, ತಿಂಗಳುಗಟ್ಟಲೇ .... ವರ್ಷಗಟ್ಟಲೇ ಹೇಳುತ್ತಾ ಇರುವ ಚಾಳಿ ಇರುತ್ತದೆ. ಹೇಳುತ್ತಾ ಹೇಳುತ್ತಾ ಆ ಮಾತುಗಳು ಹಳಸಲಾದರೂ, ಕೇಳುಗರಿಗೆ ಬೋರ್ ಅನ್ನಿಸಿದರೂ, ಕೇಳಿ ಕೇಳಿ ಕೇಳುಗರಿಗೆ ಆ ವಿಷಯದ ಬಗ್ಗೆ ವೈರಾಗ್ಯ ಬಂದರೂ ಇವರು ಆ ಮಾತುಗಳ ಪುನರಾವರ್ತನೆ ಬಿಡುವುದಿಲ್ಲ! ಹೀಗೇ ಹೇಳುವುದನ್ನು, ಈ ರೀತಿಯ ಪದಗಳು ಅಥವಾ ವಾಕ್ಯಗಳನ್ನು "ಕ್ಲೀಷೆ" ಎಂದು ಕರೆಯಲಾಗುತ್ತದೆ.

ಕ್ಲೀಷೆ ಅಂದರೆ, ಹೆಚ್ಚು ಬಾರಿ ಬಳಸುವುದರಿಂದ ತನ್ನ ಹೊಸತನವನ್ನು ಕಳೆದುಕೊಂಡ ಮಾತು ಅಥವಾ ಅಭಿವ್ಯಕ್ತಿ.

ಹೇಳುವ ಮಾತುಗಳು ತನ್ನ ಒಳ್ಳೆಯದಕ್ಕೇ ಆದರೂ, ಹೇಳಿದ್ದನ್ನು ಪಾಲಿಸುವುದರಿಂದ ತನಗೇ ಒಳಿತಾಗುವುದಾದರೂ, ಹಠ ಹಿಡಿದಂತೆ ಹೇಳುವುದರಿಂದ ಹೇಳುವ ವ್ಯಕ್ತಿಯ ಬಗೆಗೂ, ಹೇಳುವ ಮಾತಿನ ಬಗೆಗೂ, ಹೇಳುವ ರೀತಿಯ ಬಗೆಗೂ ಜಿಗುಪ್ಸೆ ಆಗುವುದಂತೆ. ವೈರಾಗ್ಯ ಬರುವುದಂತೆ !

"ಅತ್ತಿತ್ತ ಮಿಸುಕಾಡಲೂ ಬಿಡದೇ, ಪದೇಪದೇ "ಓದು ... ಓದು ... ಓದು ...." ಎಂಬಂತಹ ಮಾತುಗಳೂ ಕ್ಲೀಷೆಗಳಾಗುತ್ತವೆ. ಓದಿನ ಬಗ್ಗೆ ಇರುವ ಆಸಕ್ತಿಯನ್ನು ದೂರಮಾಡಿ ವೈರಾಗ್ಯವನ್ನೂ ಮೂಡಿಸಬಲ್ಲವು" ಅಂತೆ!

"ಅತೀವ ಮಡಿವಂತಿಕೆ ...ಮಡಿ ...ಮಡಿ ....ಮಡಿ ಎಂದು ಸಾಕಪ್ಪಾ ಈ ಮಡಿ ಎಂದು ಮಡಿಯಲ್ಲಿರುವವರಿಗೂ ಅನ್ನಿಸಿದರೆ ಅದು ಕ್ಲೀಷೆ ತಾನೇ "?

ನೆಟ್ವರ್ಕ್ ಮಾರ್ಕೆಟಿಂಗ್ ಬಾಸ್ "ಜನರನ್ನ ಸೇರಿಸು ... ನೇಮಕಾತಿ ಮಾಡು... ನೇಮಕಾತಿ ಮಾಡು... ಎಂದು ಹೇಳಿದ್ದನ್ನೆ ಜೀವಮಾನವಿಡೀ ಹೇಳುತ್ತಿದ್ದರೆ, ಕ್ಲೀಷೆಯಾಗದಿದ್ದೀತೇ"?

"ಇವತ್ತಿನಷ್ಟು ಉತ್ತಮ ಅವಕಾಶ ಎಂದೂ ಸಿಗದು ಎಂದು, ಹೇಳಿದ್ದನ್ನೇ ಪ್ರತಿದಿನವೂ ಸಂತೆಯಲ್ಲಿ ಹೇಳುತ್ತಿದ್ದರೆ ಅದು ಕ್ಲೀಷೆ".

ಪಾಲಿಸದವರಿಗೆ ಏನೂ ಮಾಡದಿದ್ದರೆ ಮ್ಯಾಂಡೇಟರಿ, ಕಂಪಲ್ಸರಿ, ಖಡ್ಡಾಯ ಎನ್ನುವ ಯುಕ್ತಿಗಳೂ ಕ್ಲೀಷೆಗಳಾಗುತ್ತವೆ.

ಇನ್ನು ಕೆಲವರ "ಹ್ಯಾಪ್ಪಿಲೀ ಮ್ಯಾರೀಡ್ ಟು" ..... "ತಮ್ಮ ಬಿಡುವಿಲ್ಲದ ಕಾರ್ಯಗಳ ನಡುವೆಯೂ ನಮಗಾಗಿ ಬಂದಿದ್ದಾರೆ." "ನಿಮ್ಮನ್ನು ಮೋಟಿವೇಟ್ ಮಾಡುತ್ತಾರೆ ", "ನಾನು ನೇರಾ ನೇರ ಮಾತನಾಡುವುದು".... "ನಾನು ಯಾರಿಗೂ ಕೇರ್ ಮಾಡುವುದಿಲ್ಲ" .... "ಸಮಯ ಬಂದಾಗ ಎಲ್ಲವೂ ಗೊತ್ತಾಗುತ್ತದೆ" .... "ಏನು ಮಾಡುವುದು ...ಎಲ್ಲಾ ನನ್ನ ಕರ್ಮಾ" .... "ಜೀವನ ಒಂದು ಹೋರಾಟ" .... "ಎಷ್ಟು ದಿನ ನಡೆಯುತ್ತದೆ ನಾನೂ ನೋಡ್ತೇನೆ" ಇತ್ಯಾದಿ ನುಡಿಗಟ್ಟುಗಳು ಕೂಡಾ ಕ್ಲೀಷೆಗಳೇ.

ಕ್ಲೀಷೆಗಳು ಹೇಗೆ ಉತ್ಪತ್ತಿಯಾಗುತ್ತವೆ ಎಂದರೆ, ಹೊಸದಾಗಿ, ಅರ್ಥಪೂರ್ಣವಾಗಿ ಹುಟ್ಟಿದ ವಾಕ್ಯಗಳು ಜನರಲ್ಲಿ ಹೆಚ್ಚು ಪ್ರಚಲಿತವಾಗುತ್ತವೆ. ಆದರೆ ಅವುಗಳನ್ನು ನಿರಂತರವಾಗಿ, ಯೋಚನೆ ಇಲ್ಲದೆ ಬಳಸಿದಾಗ ಅವು ತನ್ನ ಪ್ರಭಾವವನ್ನು ಕಳೆದುಕೊಳ್ಳುತ್ತವೆ. ಈ ರೀತಿಯಾಗಿ ಹೊಸತನ ಕಳೆದುಕೊಂಡ ಮಾತುಗಳು ಕ್ಲೀಷೆಗಳಾಗಿ ಮಾರ್ಪಡುತ್ತವೆ.

ಕ್ಲೀಷೆಗಳು ಕೇಳುಗರ ಮೇಲೆ ಬೀರುವ ಪರಿಣಾಮವೂ ನಗಣ್ಯವಾಗುತ್ತಾ ಹೋಗುತ್ತದೆ. ಕ್ಲೀಷೆಗಳನ್ನು ಹೆಚ್ಚಾಗಿ ಬಳಸುವವರು ತಮ್ಮ ಆಲೋಚನೆಗಳನ್ನು ಸ್ಪಷ್ಟವಾಗಿ ಹಾಗೂ ವೈಶಿಷ್ಟ್ಯದಿಂದ ವ್ಯಕ್ತಪಡಿಸಲು ಸಾಧ್ಯವಾಗುವುದಿಲ್ಲ. ಇದರಿಂದ ಸಂಭಾಷಣೆ ನಿಷ್ಪ್ರಭವಾಗುತ್ತದೆ. ಹೊಸತನ ಇಲ್ಲದ ಮಾತುಗಳು ವ್ಯಕ್ತಿಯ ಸೃಜನಶೀಲತೆಯ ಕೊರತೆಯನ್ನು ತೋರಿಸುತ್ತವೆ. ಕ್ಲೀಷೆಗಳನ್ನು ಕಡಿಮೆ ಮಾಡಿ, ಹೊಸತನದಿಂದ ಮಾತನಾಡುವುದರಿಂದ ನಮ್ಮ ವ್ಯಕ್ತಿತ್ವ ಮತ್ತಷ್ಟು ಪ್ರಭಾವಶೀಲವಾಗುತ್ತದೆ.

ಏನು ಮಾಡಬೇಕು ಎನ್ನುವುದನ್ನು ಹೇಗೆ ಮಾಡಬೇಕು / ಹೇಗೆಲ್ಲಾ ಮಾಡಬಹುದು, ಏಕೆ ಮಾಡಬೇಕು ಅದರಿಂದಾಗುವ ಪ್ರಯೋಜನಗಳೇನು? ಇತ್ಯಾದಿ ವಿವರ ಅಥವಾ ಉದಾಹರಣೆಗಳೊಂದಿಗೆ ಸೃಜನಶೀಲವಾಗಿ ಅರ್ಥಮಾಡಿಸುವುದರಿಂದ ಕ್ಲೀಷೆಗಳ ಸವಾಲಿನಿಂದ ಹೊರಬಂದು, ಪರಿಮಕಾರಿಯಾಗಿ ನಾವು ವ್ಯವಹರಿಸಬಹುದು.

ನೀವು ಬಳಸುತ್ತಿರುವ ಕ್ಲೀಷೆಗಳನ್ನು ಗುರುತಿಸಿ. ನೀವು ಮಾತಾಡುವಾಗ ಅಥವಾ ಬರೆಯುವಾಗ ಯಾವ ಪದಗಳನ್ನು ಮತ್ತೆ ಮತ್ತೆ ಬಳಸುತ್ತೀರಿ ಎಂಬುದನ್ನು ಗಮನಿಸಿ.

ನಿಮ್ಮದೇ ಅಭಿಪ್ರಾಯವನ್ನು ರೂಪಿಸಿಕೊಳ್ಳಿ. ಪದಸಂಪತ್ತಿಯನ್ನು ಹೆಚ್ಚಿಸಿ. ಹೊಸ ಪದಗಳನ್ನು ಕಲಿಯುವುದು ಕ್ಲೀಷೆಗಳನ್ನು ಕಡಿಮೆ ಮಾಡುತ್ತದೆ. ಪುಸ್ತಕ ಓದುವುದು, ಉತ್ತಮ ಲೇಖನಗಳನ್ನು ಓದುವುದು ಇದಕ್ಕೆ ಸಹಾಯವಾಗುತ್ತದೆ.

ನಿತ್ಯ ಬರೆಯುವುದರಿಂದ ಭಾಷೆಯಲ್ಲಿ ಹೊಸತನ ಬರುತ್ತದೆ. ಡೈರಿ ಬರೆಯುವುದು ಅಥವಾ ಚಿಕ್ಕ ಲೇಖನ ಬರೆಯುವುದು ಸಹಾಯಕ.

ಒಂದೇ ಮಾತನ್ನು ಬೇರೆ ರೀತಿಯಲ್ಲಿ ಹೇಳಲು ಪ್ರಯತ್ನಿಸಿ. ಉದಾಹರಣೆಗೆ:

"ಜೀವನ ಒಂದು ಪ್ರಯಾಣ" → "ಜೀವನವೆಂಬುದು ಪ್ರತಿದಿನ ಹೊಸ ಅನುಭವಗಳ ಸರಮಾಲೆ".

**ಸಂಕಲನ : ರೊ. ರಾಜೇಶ್ ಡಿ. ಶೆಣೈ**

## ಬೌದ್ಧಿಕ ಸಿರಿ *ನಿರೀಕ್ಷಿಸಿದ ಫಲಿತಾಂಶ ಸಿಕ್ಕಿಲ್ಲ!*

ಯಾರಿಗೂ ಯಾವತ್ತಾದರೂ ತಾವು ನಿರೀಕ್ಷಿಸಿದ ಫಲಿತಾಂಶ ಸಿಕ್ಕಿಲ್ಲ .... ನಿರೀಕ್ಷಿಸಿದ ಮಟ್ಟಿಗೆ ಯಶಸ್ಸು ಸಿಕ್ಕಿಲ್ಲ .... ನಿರೀಕ್ಷಿಸಿದ ಆದಾಯ ಸಿಗುತ್ತಿಲ್ಲ ಎಂದೆಲ್ಲಾ ಅನಿಸಲು ಆರಂಭಿಸಿದರೆ, ಸ್ವಾಭಾವಿಕವಾಗಿ ಅವರು ಕಾರಣಗಳನ್ನು ಹುಡುಕಲು ಆರಂಭಿಸುತ್ತಾರೆ.

ಅದರಲ್ಲೂ, ಹೊರ ಪ್ರಪಂಚದಿಂದ ಏನೆಲ್ಲಾ ಸಮಸ್ಯೆಗಳು ಬಂದಿರಬಹುದು ಎಂದು ಯೋಚಿಸುತ್ತಾರೆ. ಆದರೆ, ತಜ್ಞರ ಪ್ರಕಾರ, ಮೊದಲು ಅವರು ತನ್ನೊಳಗಿನ ಸಮಸ್ಯೆ ಏನಿದೆ ಎಂದರಿಯಲು ಪ್ರಯತ್ನಿಸಬೇಕಂತೆ. ಒಂದು ಕ್ಷಣ ಅತ್ತ ಗಮನ ಹರಿಸಿ, ತನ್ನನ್ನೇ ತಾನು ಪ್ರಾಮಾಣಿಕವಾಗಿ ಕೆಲವು ಪ್ರಶ್ನೆಗಳು ಕೇಳಿಕೊಳ್ಳಬೇಕಂತೆ.

ತಾನು ನಿರೀಕ್ಷಿಸಿದ್ದು ಸಿಗಬೇಕಾದರೆ, ಅದಕ್ಕೆ ತಕ್ಕ ಸಮಯ ತಾನು ನೀಡುತ್ತಿದ್ದೇನೆಯೇ ? ಅದಕ್ಕೆ ತಕ್ಕ ಆದ್ಯತೆ ತಾನು ನೀಡುತ್ತಿದ್ದೇನೆಯೇ ? ಅದಕ್ಕೆ ತಕ್ಕ ಶ್ರಮ ತಾನು ಹಾಕುತ್ತಿದ್ದೇನೆಯೇ ? ತನ್ನ ಆ ನಿರೀಕ್ಷೆಗೆ ಬೇಕಾದ ಪ್ರಯತ್ನ ತನ್ನಿಂದ ಆಗುತ್ತಿದೆಯೇ? ಅದಕ್ಕೆ ಬೇಕಾದ ಅರ್ಹತೆಗಳಿಸಲು, ಆ ಹಂತದ ಯಶಸ್ಸನ್ನು ಪಡೆಯಲು ಬೇಕಾದ ಜ್ಞಾನವನ್ನು ತಾನು ಸಂಪಾದಿಸುತ್ತಿದ್ದೇನೆಯೇ ? ಇತ್ಯಾದಿ ಪ್ರಶ್ನೆಗಳನ್ನು ಪ್ರಾಮಾಣಿಕವಾಗಿ ತನಗೆ ತಾನೇ ಕೇಳಿಕೊಂಡಾಗ ಮತ್ತು ಹೃದಯಪೂರ್ವಕವಾಗಿ ಉತ್ತರ ಹುಡುಕಲು ಪ್ರಾರಂಭಿಸಿದಾಗ, ತನ್ನ ದಾರಿಯಲ್ಲಿರುವ ಅಡೆತಡೆಗಳು ತನಗೆ ಸ್ಪಷ್ಟವಾಗುತ್ತವೆ. ತನ್ನ ಶಕ್ತಿ – ಸಾಮರ್ಥ್ಯ ಮತ್ತು ತನ್ನ ದೌರ್ಬಲ್ಯಗಳು ಗೊತ್ತಾಗುತ್ತವೆ.

ಹೀಗೆ ಒಮ್ಮೆ ತನ್ನ ಶಕ್ತಿ – ಸಾಮರ್ಥ್ಯ, ತನ್ನ ದೌರ್ಬಲ್ಯಗಳು, ತನಗಿರುವ ಅವಕಾಶಗಳು, ತನಗೆ ಎದುರಾಗಬಹುದಾದ ಸವಾಲುಗಳನ್ನು ಅರಿತುಕೊಂಡರೆ ನಿಮ್ಮ ಮುಂದಿನ ಹೆಜ್ಜೆಗಳು ಸ್ಪಷ್ಟವಾಗುತ್ತವೆ — ಮತ್ತು ಯಶಸ್ಸು ನಿಮ್ಮತ್ತ ಬರಲು ಆರಂಭವಾಗುತ್ತದೆ.

ಇದೇ SWOT (Strength, Weakness, Opportunities and Threats) ಅನಾಲಿಸಿಸ್ ನ ಸಂಕ್ಷಿಪ್ತ ರೂಪ.

**ಸಂಕಲನ : ರೊ. ರಾಜೇಶ್ ಡಿ. ಶೆಣೈ**

## ಮಾರ್ಚ್ 24ರ ಸಭೆಯ ಛಾಯಾಚಿತ್ರಗಳು













## ಕಾರ್ಯದರ್ಶಿಯವರ ವರದಿ



ರೋಟರಿ ಐಸಿರಿಯ 36ನೇ ವಾರದ ಸಭೆಯು ತಾ. 24.3.26 ರಂದು ಆರ್.ಸಿ.ಸಿ. ಕಾರ್ಯಾಲಯದಲ್ಲಿ ಜರಗಿತು. ರೊ. ಮಂಜುನಾಥ ಉಪಾಧ್ಯ ಅವರು ಪ್ರಾರ್ಥನೆ ನಡೆಸಿದರು. ಸಭೆಯ ಅಧ್ಯಕ್ಷತೆಯನ್ನು ವಹಿಸಿದ ಪೂರ್ವ ಅಧ್ಯಕ್ಷರಾದ ರೊ. ಸ್ಮಿತಾ ಜಿ. ಕಾಮತ್ ರವರು ಎಲ್ಲರನ್ನು ಸ್ವಾಗತಿಸಿದರು. ರೊ. ಗೀತಾಶ್ರೀ ಉಪಾಧ್ಯರವರು ಕಳೆದ ವಾರದ ವರದಿಯನ್ನು ಮಂಡಿಸಿದರು.

ಜೀವನಸಿರಿ ಸರಣಿ ಕಾರ್ಯಕ್ರಮದಲ್ಲಿ ಸಭೆಯ ಅಥಿತಿಯಾಗಿ ಆಗಮಿಸಿದ ಐಸಿರಿಯ ಹಿರಿಯ ಸದಸ್ಯರಾದ ರೊ. ಡಾ. ಎ. ಗಣೇಶ್ ರವರು ತಮ್ಮ ಜೀವನದ ಅನುಭವಗಳನ್ನು ಹಂಚಿಕೊಂಡರು. ತಮ್ಮ ಬಾಲ್ಯದ ದಿನಗಳು, ವಿದ್ಯಾಭ್ಯಾಸ, ಎಂಜಿನಿಯರಿಂಗ್, ಪ್ರಾಧ್ಯಾಪಕ ವೃತ್ತಿ ಹಾಗೂ ವೃತ್ತಿ ಅನುಭವ ಹಾಗೂ ತಮ್ಮ ವೈಯಕ್ತಿಕ ಜೀವನದ ಮಜಲುಗಳನ್ನು ಹಂಚಿಕೊಂಡರು.

ರೊ. ಪ್ರಕಾಶ್ ಶೆಣೈ ಅವರು ಗಣೇಶ ರವರ ಅನುಭವದ ಮಾತುಗಳನ್ನು ಪ್ರಶಂಸಿಸಿದರು. ರೊ. ಅಶೋಕ್ ಸಣ್ಣಕ್ಕಿಬೆಟ್ಟು ಇವರು ತಮ್ಮ ಗುರುಗಳಾದ ಎಂದಿನ ಶಿಸ್ತಿನ ಗಾಂಭೀರ್ಯದ ಡಾ. ಗಣೇಶ್ ರವರನ್ನು ನೆನಪಿಸಿಕೊಂಡು ಅವರ ಬಗ್ಗೆ ಪ್ರಶಂಶನೀಯ ಮಾತುಗಳನ್ನು ಆಡಿದರು.

ರೊ. ಮಂಜುನಾಥ ಉಪಾಧ್ಯ ರವರು ಅವರ ಅನುಭವದ ಮಾತಿಗೆ ಮೆಚ್ಚುಗೆಯ ಮಾತುಗಳನ್ನಾಡಿದರು. ರೊ. ಡಾ. ಪ್ರಭಾಕರ ರೆಂಜಾಳ್ ರವರು ಡಾ. ಗಣೇಶರವರ ಮಗಳು ತಮ್ಮ ಶಿಷ್ಯೆಯಾಗಿದ್ದು ಈಗ ಶಿರಸಿಯಲ್ಲಿ ಪ್ರಾಧ್ಯಾಪಕ ವೃತ್ತಿ ನಡೆಸುತ್ತಿರುವುದಕ್ಕೆ ಸಂತಸ ವ್ಯಕ್ತಪಡಿಸಿದರು. ರೊ. ಕೊರಗಪ್ಪ ಶೆಟ್ಟಿಗಾರ್ ಅವರು ಡಾ. ಗಣೇಶ್ ರವರ ಮಾತುಗಳಿಗೆ ಸ್ಪಂದಿಸಿದರು. ರೊ. ಪ್ರಭಾಕರ ಶೆಟ್ಟಿ ಅವರು ಡಾ. ಗಣೇಶ್ ರವರು ಅಧ್ಯಕ್ಷರಾಗಿದ್ದಾಗ ತಾನು ಕಾರ್ಯದರ್ಶಿಯಾಗಿ ಅವರ ಜೊತೆ ಕೆಲಸ ಮಾಡಿದ್ದು ನೆನಪಿಸಿಕೊಂಡರು.

ನಿಯೋಜಿತ ಅಧ್ಯಕ್ಷರಾದ ರೊ. ಸಂದೀಪ್ ಕುಮಾರ್ ತಾ. 22.03.26 ರಂದು ರೊ. ಹೇಮಂತ್ ಯು. ಕಾಂತ್ ರವರ ನಾಯಕತ್ವದಲ್ಲಿ ನಡೆದ PELS ಮತ್ತು SELS ಕಾರ್ಯಕ್ರಮದ ಬಗ್ಗೆ ಮಾಹಿತಿ ನೀಡಿದರು.

ಸಭಾಧ್ಯಕ್ಷರಾದ ರೊ. ಸ್ಮಿತಾ ಕಾಮತ್ ರವರು ಕಳೆದ ವಾರ ನಡೆದ ಜಂಟಿ ಸಭೆಯಲ್ಲಿ ಹೆಚ್ಚಿನ ಸದಸ್ಯರು ಭಾಗವಹಿಸಿದ್ದು ತುಂಬಾ ಸಂತೋಷವಾಗಿದೆ ಎಂದರು. ಜಿಲ್ಲೆಯಲ್ಲಿ ಹಾಗೂ ವಲಯದಲ್ಲಿ ರೋಟರಿ ಐಸಿರಿಯನ್ನು ಗುರುತಿಸಿ ಮೂರು ಜನರಿಗೆ ಡಿಸ್ಟ್ರಿಕ್ಟ್ ಪೋಸ್ಟ್ ಹಾಗು ನಾಲ್ಕು ಜನರಿಗೆ ವಲಯದಲ್ಲಿ ಪೋಸ್ಟ್ ಹಾಗು ರಾಜೇಶ್ ಶೆಣೈಇವರಿಗೆ ಸ್ಪೆಷಲ್ ಪೋಸ್ಟ್ ಸಿಕ್ಕಿರುವುದು ಸಂತಸವಾಗಿದೆ ಎಂದರು.

ಜೀವನಸಿರಿ ಕಾರ್ಯಕ್ರಮ ಅಡಿಯಲ್ಲಿ ತಮ್ಮ ಜೀವನ ಅನುಭವದ ಮಾತುಗಳನ್ನಾಡಿದ ಡಾ. ಗಣೇಶ್ ರವರನ್ನು ಗುರುತಿಸಿ ಶಾಲು ಹೊದಿಸಿ ಗೌರವಿಸಲಾಯಿತು. ವಾರದ ಬುಲೆಟಿನ್ ಐಶ್ವರ್ಯ ಸಂಚಿಕೆಯನ್ನು ರೊ. ಡಾ. ಎ. ಗಣೇಶ್ ರವರು ಬಿಡುಗಡೆಗೊಳಿಸಿದರು. ರೊ. ಗೀತಾಶ್ರೀ ಉಪಾಧ್ಯಾರವರು ಧನ್ಯವಾದ ಸಮರ್ಪಿಸಿದರು. ರಾಷ್ಟ್ರಗೀತೆಯೊಂದಿಗೆ ಸಭೆಯ ಮುಕ್ತಾಯಗೊಂಡಿತು.

## "ಐಶ್ವರ್ಯ" 38ನೇ ಸಂಚಿಕೆ ಬಿಡುಗಡೆ




ರೊ. ರಾಜೇಶ್ ಡಿ. ಶೆಣೈ ಸಂಪಾದಕತ್ವದ ರೋಟರಿ ಐಸಿರಿಯ ಸಾಪ್ತಾಹಿಕ "ಐಶ್ವರ್ಯ"ದ ಮೂವತ್ತೆಂಟನೇ ಇ–ಸಂಚಿಕೆಯನ್ನು, ರೊ. ಸ್ಮಿತಾ ಕಾಮತ್ ರವರು ರೊ. PHF. ಡಾ. ಎ. ಗಣೇಶ್ ರವರ ಮೂಲಕ 24/03/26ರಂದು ಬಿಡುಗಡೆಗೊಳಿಸಿದರು.




24/03/26ರ ಜೀವನಸಿರಿ ಕಾರ್ಯಕ್ರಮ ನಡೆಸಿಕೊಟ್ಟ ರೊ. PHF. ಡಾ. ಎ. ಗಣೇಶ್ ರವರನ್ನು ಶಾಲು ಹೊದಿಸಿ ಗೌರವಿಸಲಾಯಿತು.